# ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ನಿಯಮಿತ

ಜನರಲ್ ತಿಮ್ಮಯ್ಯ ವೃತ್ತ, ಮಡಿಕೇರಿ –571 201
EMAIL: kdccbank@yahoo.co.in Ph: 08272–229691/224805

ಸಂ./ಸಿಬ್ಬಂದಿ/ನೇಮಕಾತಿ/4070/2024–25 ದಿನಾಂಕ : 19.12.2024

## ನೇಮಕಾತಿ ಪ್ರಕಟಣೆ

### ಕಿರಿಯ ಸಹಾಯಕರ ಹುದ್ದೆಗೆ ಅರ್ಜಿ ಆಹ್ವಾನ

ಬ್ಯಾಂಕಿನಲ್ಲಿ ಖಾಲಿ ಇರುವ ಈ ಕೆಳಕಂಡ ಕಿರಿಯ ಸಹಾಯಕರ ಹುದ್ದೆಯನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

| ಕ್ರ ಸಂ | ಹುದ್ದೆಯ ಹೆಸರು | ಖಾಲಿ ಯಿರುವ ಹುದ್ದೆಯ ಸಂಖ್ಯೆ | ವರ್ಗೀಕರಣ | ಒಳ ಮೀಸಲಾತಿ | | | | | | |
|---|---|---|---|---|---|---|---|---|---|---|
| | | | | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗ ವಿಕಲರು | ಮಾಜಿ ಸೈನಿಕ | ಕನ್ನಡ ಮಾಧ್ಯಮ ಅಭ್ಯರ್ಥಿ | ಒಟ್ಟು |
| 1 | ಕಿರಿಯ ಸಹಾಯಕರು<br>ವೇತನ ಶ್ರೇಣಿ ರೂ. 30350-750-32600-850-36000-950-39800-1100-46400-1250-53900-1450-58250 | 32 | ಸಾಮಾನ್ಯ | 2 | 5 | 4 | 1 | 1 | 1 | 14 |
| | | | ಪರಿಶಿಷ್ಟ ಜಾತಿ | 1 | 2 | 1 | 1 | 0 | 0 | 05 |
| | | | ಪರಿಶಿಷ್ಟ ಪಂಗಡ | 1 | 1 | 1 | 0 | 0 | 0 | 03 |
| | | | ಪ್ರ ವರ್ಗ–1 | 1 | 1 | 0 | 0 | 0 | 0 | 02 |
| | | | ಪ್ರ ವರ್ಗ–2 ಎ | 1 | 2 | 1 | 1 | 0 | 0 | 05 |
| | | | ಪ್ರ ವರ್ಗ–2 ಬಿ | 1 | 0 | 0 | 0 | 0 | 0 | 01 |
| | | | ಪ್ರ ವರ್ಗ– 3ಎ | 1 | 0 | 0 | 0 | 0 | 0 | 01 |
| | | | ಪ್ರ ವರ್ಗ– 3ಬಿ | 1 | 0 | 0 | 0 | 0 | 0 | 01 |
| | | | ಒಟ್ಟು | 9 | 11 | 7 | 3 | 1 | 1 | 32 |

- ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ 20/12/2024 ಹಾಗೂ ಕೊನೆಯ ದಿನಾಂಕ **16/01/2025** ಮತ್ತು ಶುಲ್ಕ ಪಾವತಿಸಲು ಕಡೆಯ ದಿನಾಂಕ **17/01/2025**
- ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ ವಿಳಾಸ www.kodagudccbank.com ದಲ್ಲಿ ಆನ್‌ಲೈನ್ ಅರ್ಜಿ, ಅರ್ಹತೆಗಳು ಮತ್ತು ಇನ್ನಿತರ ನಿಬಂಧನೆಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,
ಮಡಿಕೇರಿ.

ಆನ್‌ಲೈನ್ ಅರ್ಜಿ, ಅರ್ಹತೆಗಳು ಮತ್ತು ಇನ್ನಿತರ ನಿಬಂಧನೆಗಳು

ಕಿರಿಯ ಸಹಾಯಕರು:

| ಕ್ರ ಸಂ | ಹುದ್ದೆಯ ಹೆಸರು | ವಿದ್ಯಾರ್ಹತೆ ಮತ್ತು ಇತರೆ ಅರ್ಹತೆಗಳು |
|---|---|---|
| 1 | ಕಿರಿಯ ಸಹಾಯಕರು | 1) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಶೇ 55% ಕನಿಷ್ಟ ಅಂಕಗಳಿಕೆಯ ವಾಣಿಜ್ಯೇತರ ಪದವಿ ಅಥವಾ ಶೇ 50 ಕನಿಷ್ಟ ಅಂಕಗಳಿಕೆಯ ವಾಣಿಜ್ಯ ಪದವಿ. ಡಿಪ್ಲೊಮೋ ಇನ್ ಕೋ ಅಪರೇಟಿವ್ ಮ್ಯಾನೇಜ್‌ಮೆಂಟ್ ಮತ್ತು ಸ್ನಾತಕೋತ್ತರ ಪದವೀಧರರಿಗೆ ಆದ್ಯತೆ.<br>2) ಕನಿಷ್ಟ 6 ತಿಂಗಳು ಕಡಿಮೆ ಇಲ್ಲದ ಡಿಪ್ಲೊಮೋ ಇನ್ ಕಂಪ್ಯೂಟರ್ ಆಪರೇಷನ್ ಮತ್ತು ಅಪ್ಲಿಕೇಶನ್ಸ್ ಸರ್ಟಿಫಿಕೇಟ್ ಕೋರ್ಸ್ ಮಾಡಿರತಕ್ಕದ್ದು. |

I. ವಯೋಮಿತಿ:

ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕಕ್ಕೆ ಕನಿಷ್ಟ 18 ವರ್ಷಗಳು ಹಾಗೂ ಗರಿಷ್ಟ ಸಾಮಾನ್ಯ ವರ್ಗಕ್ಕೆ–35 ವರ್ಷಗಳು, ಪ್ರ ವರ್ಗ–2ಎ, 2ಬಿ, 3ಎ, 3ಬಿ ವರ್ಗಗಳಿಗೆ–38 ವರ್ಷಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 ವರ್ಗಗಳಿಗೆ –40 ವರ್ಷಗಳು ಹಾಗೂ ಸರ್ಕಾರಿ ಆದೇಶದ ಅನುಸಾರ ಅಂಗವಿಕಲರು ಮತ್ತು ವಿಧವೆಯರಿಗೆ 10 ವರ್ಷ ಮತ್ತು ಮಾಜಿ ಸೈನಿಕರಿಗೆ ಮಿಲಿಟರಿ ಸೇವೆಯಲ್ಲಿ ಸೇವೆ ಸಲ್ಲಿಸಿದ ಅವಧಿ ಹಾಗೂ ಕನಿಷ್ಟ 15 ವರ್ಷ ಬ್ಯಾಂಕಿನಲ್ಲಿ ಸೇವೆ ಸಲ್ಲಿಸುವಂತಿರಬೇಕು.

ii. ಆಯ್ಕೆ ವಿಧಾನ:

ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ

**ಕಿರಿಯ ಸಹಾಯಕರ ಹುದ್ದೆಗೆ:**

200 ಅಂಕಗಳ ಲಿಖಿತ ಪರೀಕ್ಷೆಯಿದ್ದು, ಕನ್ನಡ ಭಾಷೆಗಾಗಿ– 50 ಅಂಕಗಳು, ಸಾಮಾನ್ಯ ಇಂಗ್ಲೀಷ್‌ಗಾಗಿ –25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ –25 ಅಂಕಗಳು, ಸಹಕಾರಿ ವಿಷಯಕ್ಕಾಗಿ–50 ಅಂಕಗಳು, ಭಾರತ ಸಂವಿಧಾನಕ್ಕೆ –25 ಅಂಕಗಳು ಹಾಗೂ ಸಂಘದ ಉದ್ದೇಶ ಮತ್ತು ಕಾರ್ಯ ಚಟುವಟಿಕೆ ವಿಷಯಗಳಿಗೆ–25 ಅಂಕಗಳು ಒಳಗೊಂಡಿರುತ್ತದೆ.

**iii. ನಿಬಂಧನೆಗಳು:**

1. ಅರ್ಜಿಗಳನ್ನು ಆನ್‌ಲೈನ್ (Online) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು ಹಾಗೂ ಆನ್‌ಲೈನ್ (Online) ನಲ್ಲಿ ನೀಡಿರುವ ಸೂಚನೆಗಳನ್ವಯ ಭರ್ತಿ ಮಾಡತಕ್ಕದ್ದು.
2. ಅಭ್ಯರ್ಥಿಗಳು ಆನ್‌ಲೈನ್ (Online) ಮೂಲಕ ಸಲ್ಲಿಸುವ ಅರ್ಜಿಗಳಲ್ಲಿ ಅಪೂರ್ಣ ಹಾಗೂ ಅಸ್ಪಷ್ಟ ದಾಖಲೆಗಳನ್ನು ಅಥವಾ ತಪ್ಪು/ಅಪೂರ್ಣ ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ತಿರಸ್ಕೃತ ಅರ್ಜಿಗಳ ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲ.
3. ಅಭ್ಯರ್ಥಿಗಳು ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಭರ್ತಿ ಮಾಡಿ ಸಾಮಾನ್ಯ ಮತ್ತು ಇತರೆ ಹಿಂದುಳಿದ ಅಭ್ಯರ್ಥಿಗಳಾದಲ್ಲಿ ರೂ 1750/– ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ–1, ಮಹಿಳೆಯರು ಮತ್ತು ಅಂಗವಿಕಲರಿಗೆ ರೂ 1250/– ಗಳನ್ನು ಆನ್‌ಲೈನ್‌ನಲ್ಲಿ ಪಾವತಿಸಿ ಚಲನ್‌ನನ್ನು ಆನ್‌ಲೈನ್ ಮುಖಾಂತರ ಅಪ್‌ಲೋಡ್ ಮಾಡುವುದು. ನಿಗದಿತ ಅರ್ಜಿ ಶುಲ್ಕ ಸಂದಾಯ ಮಾಡದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,
ಮಡಿಕೇರಿ

4. ಮಹಿಳಾ/ಗ್ರಾಮೀಣ/ ಕನ್ನಡ ಮಾಧ್ಯಮ/ಅಂಗವಿಕಲರು/ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಮೀಸಲಿರಿಸಿದ ರಿಕ್ತಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾಯ ವರ್ಗಕ್ಕೆ ಸೇರಿದ ಇತರೆ ಅಭ್ಯರ್ಥಿಗಳಿಗೆ ಭರ್ತಿ ಮಾಡಲಾಗುವುದು.

5. ಈ ನೇಮಕಾತಿ ಪ್ರಕಟಣೆಯಲ್ಲಿ ತಿಳಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಯಾಗಬಹುದಾಗಿದ್ದು, ನೇಮಕಾತಿ ಪ್ರಾಧಿಕಾರವು ಬದಲಾವಣೆ ಮಾಡುವ ಮತ್ತು ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.

6. ಹುದ್ದೆಗಳಿಗೆ ಸಂಬಂಧಿಸಿದಂತೆ, ಮೀಸಲಾತಿ ಕೋರ ಬಯಸುವ ಅಭ್ಯರ್ಥಿಗಳು ಸರ್ಕಾರದ ವಿವಿಧ ಇಲಾಖೆಗಳು ನೇಮಕಾತಿಗಾಗಿ ನಿಗದಿಪಡಿಸಿರುವ ನಮೂನೆಗಳಲ್ಲಿ ಹಾಗೂ ಚಾಲ್ತಿಯಲ್ಲಿರುವ ಅಗತ್ಯ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ಇರುವ ಕೊನೆಯ ದಿನಾಂಕದ ಒಳಗೆ ಪಡೆದಿರತಕ್ಕದ್ದು. ನಂತರ ಪಡೆದ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು.

ಮೂಲ ಪ್ರಮಾಣಪತ್ರಗಳನ್ನು ನೇಮಕಾತಿ ಸಂದರ್ಶನದ ವೇಳೆ ಪರಿಶೀಲಿಸಲಾಗುವುದು.

<u>ಅ) ಅಂಗವಿಕಲ ಅಭ್ಯರ್ಥಿಗಳು:</u> ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 50 ಎಸ್‌ಆರ್‌ಆರ್ 2000 ದಿನಾಂಕ 03.09.2005 ರ ಆದೇಶದಲ್ಲಿ ತಿಳಿಸಿರುವಂತೆ ಅಂಗವಿಕಲರಿಗೆ ಮೀಸಲಿರಿಸಿದ ಹುದ್ದೆಗಳನ್ನು ಕೋರುವ ಅಭ್ಯರ್ಥಿಗಳು ವೈದ್ಯಕೀಯ ಪ್ರಮಾಣ ಪತ್ರಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ:ಸಿಆಸುಇ 115 ಸೆನೆನಿ 2005 ದಿನಾಂಕ 19/11/2005 ರಲ್ಲಿ ನಿಗಧಿಪಡಿಸಿದ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರದ ಧೃಢೀಕೃತ ಪ್ರತಿಯನ್ನು ಅರ್ಜಿ ಸಲ್ಲಿಸಲು ಇರುವ ಕೊನೆಯ ದಿನಾಂಕದ ಒಳಗೆ ಪಡೆದಿರತಕ್ಕದ್ದು.

<u>ಆ) ಗ್ರಾಮೀಣ ಅಭ್ಯರ್ಥಿ:</u> ಗ್ರಾಮೀಣ ಮೀಸಲಾತಿ ಕೋರುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಓದಿರುವ ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರವನ್ನು ಶಾಲಾ ಮುಖ್ಯೋಪಾಧ್ಯಾಯರ ಸಹಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಪಡೆದು ಪ್ರತಿಯನ್ನು ಅರ್ಜಿ ಸಲ್ಲಿಸಲು ಇರುವ ಕೊನೆಯ ದಿನಾಂಕದ ಒಳಗೆ ಪಡೆದಿರತಕ್ಕದ್ದು. ಸಾಮಾನ್ಯ ಅರ್ಹತೆ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿ ಕೋರಲು ಇಚ್ಚಿಸಿದಲ್ಲಿ ಈ ಪ್ರಮಾಣ ಪತ್ರವಲ್ಲದೇ ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ಇರುವ ಕೊನೆಯ ದಿನಾಂಕದ ಒಳಗೆ ಸಕ್ಷಮ ಪ್ರಾಧಿಕಾರದಿಂದ ಪಡೆದಿರತಕ್ಕದ್ದು.

<u>ಇ) ಮಾಜಿ ಸೈನಿಕ ಅಭ್ಯರ್ಥಿ:</u> ಮಾಜಿ ಸೈನಿಕ ಅಂದರೆ ಭೂದಳ, ನೌಕಾದಳ ಮತ್ತು ವಾಯುದಳದಲ್ಲಿ ಮಾತ್ರ, ಯಾವುದೇ ಶ್ರೇಣಿಯಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಇವರು ಸರ್ಕಾರದ ಜಾರಿಯಲ್ಲಿರುವ ನಿಯಮಗಳನ್ವಯ ಮಾಜಿ ಸೈನಿಕ ಅಭ್ಯರ್ಥಿ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ಇರುವ ಕೊನೆಯ ದಿನಾಂಕದ ಒಳಗೆ ಪಡೆದಿರತಕ್ಕದ್ದು.

<u>ಈ) ಕನ್ನಡ ಮಾಧ್ಯಮ:</u> ಸರ್ಕಾರಿ ಅಧಿಸೂಚನೆಯನ್ವಯ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು 10ನೇ ತರಗತಿಯವರೆಗೆ ಕನ್ನಡ ಮಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲು ರುಜು, ಜಾರಿ ದಿನಾಂಕ ಹಾಗೂ ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಕನ್ನಡ ಮಾಧ್ಯಮ ಅಭ್ಯರ್ಥಿ ಮೀಸಲಾತಿಯನ್ನು ರದ್ದುಪಡಿಸಲಾಗುವುದು.

7. ಜನ್ಮ ದಿನಾಂಕದ ದೃಢೀಕರಣಕ್ಕಾಗಿ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಸಲ್ಲಿಸತಕ್ಕದ್ದು.

**ಮುಖ್ಯ ಕಾರ್ಯನಿರ್ವಹಣಾಧಿಕಾರಿ**
**ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,**
**ಮಡಿಕೇರಿ.**

8. ವಿದ್ಯಾರ್ಹತೆಗೆ ಸಂಬಂಧಿಸಿದ ಅಂಕಪಟ್ಟಿಗಳು, ಪದವಿ ಪ್ರಮಾಣ ಪತ್ರಗಳು, ಎಲ್ಲಾ ವರ್ಷಗಳ/ಸೆಮಿಸ್ಟರ್‌ಗಳ ಅಂಕಗಳನ್ನು, ಒಟ್ಟು ಪಡೆದ ಅಂಕಗಳನ್ನು ಮತ್ತು ಶೇಕಡವಾರು ಅಂಕಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು. ಅಂಕಪಟ್ಟಿಗಳನ್ನು ಸಂದರ್ಶನ ವೇಳೆಯಲ್ಲಿ ಹಾಜರುಪಡಿಸಬೇಕು. ಪದವಿ ಶಿಕ್ಷಣದಲ್ಲಿ ಕಂಪ್ಯೂಟರ್, ಪದವಿಯ ಒಂದು ವಿಷಯವಾಗಿದ್ದಲ್ಲಿ ಕಂಪ್ಯೂಟರ್ ಕೋರ್ಸ್‌ನ ದೃಢೀಕರಣದ ಅಗತ್ಯವಿಲ್ಲ.

9. ಲಿಖಿತ ಪರೀಕ್ಷೆ/ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.ಲಿಖಿತ ಪರೀಕ್ಷೆಗೆ ದಿನಾಂಕ, ವೇಳೆ ಮತ್ತು ಸ್ಥಳದ ವಿವರಗಳನ್ನು ಬ್ಯಾಂಕ್ Website ನಲ್ಲಿ ಪ್ರಕಟಿಸಲಾಗುವುದು.

10. ಅಭ್ಯರ್ಥಿಯು ಸಂಬಂಧಪಟ್ಟ ವಿದ್ಯಾರ್ಹತೆಯ ಪದವಿಯ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಅಂಗವಿಕಲ ದೃಢೀಕರಣ ಪತ್ರ, ಕನ್ನಡ ಮಾಧ್ಯಮ ಪ್ರಮಾಣ ಪತ್ರ, ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ ಮತ್ತು ಮಾಜಿ ಸೈನಿಕ ಪ್ರಮಾಣ ಪತ್ರ, ಕಂಪ್ಯೂಟರ್ ಜ್ಞಾನ ಹೊಂದಿರುವ ಮೂಲ ಪ್ರಮಾಣ ಪತ್ರ ಮತ್ತು ಇತರೆ ಎಲ್ಲಾ ಅರ್ಹತಾ ದಾಖಲಾತಿಗಳ ಮೂಲ ಪ್ರಮಾಣ ಪತ್ರಗಳನ್ನು ಅಥವಾ ಸ್ವಯಂ ದೃಢೀಕರಿಸಿದ ಮೂಲ ದಾಖಲಾತಿಗಳ ಜೆರಾಕ್ಸ್ ಪ್ರತಿಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು.

11. ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಗಳಲ್ಲಿ ಅಪ್‌ಲೋಡ್ ಮಾಡುವ ಮಾಹಿತಿಗಳ ಆಧಾರದ ಮೇಲೆ ಅವರುಗಳು ಲಿಖಿತ ಪರೀಕ್ಷೆಗೆ ಅರ್ಹರೇ ಎಂಬುದನ್ನು ಬ್ಯಾಂಕು ಪರಿಶೀಲಿಸಿ, ಮೇಲ್ನೋಟಕ್ಕೆ ಅರ್ಹರೆಂದು ಕಂಡು ಬಂದ ಅಭ್ಯರ್ಥಿಗಳಿಗೆ ಮಾತ್ರ ಲಿಖಿತ ಪರೀಕ್ಷೆಗೆ ಕರೆ ಪತ್ರಗಳನ್ನು Website ನಲ್ಲಿ ಪ್ರಕಟಿಸಲಾಗುತ್ತದೆ ಹಾಗೂ ಅಭ್ಯರ್ಥಿಗಳು ಕರೆ ಪತ್ರವನ್ನು download ಮಾಡಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ ನಿಗದಿಪಡಿಸಿರುವ ವಿದ್ಯಾರ್ಹತೆಯ ಪ್ರಮಾಣ ಪತ್ರಗಳು, ವಯೋಮಿತಿ, ಮೀಸಲಾತಿ, ಇತ್ಯಾದಿಗಳಿಗೆ ಅನುಗುಣವಾಗಿ ಅರ್ಜಿಯಲ್ಲಿ ಸರಿಯಾದ ಮಾಹಿತಿಗಳನ್ನು ಅಪ್‌ಲೋಡ್ ಮಾಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.

12. ಅಭ್ಯರ್ಥಿಗಳಿಗೆ ಕನ್ನಡ ಭಾಷೆಯ ಜ್ಞಾನ(ಓದಲು ಮತ್ತು ಬರೆಯಲು) ಕಡ್ಡಾಯವಾಗಿರುತ್ತದೆ.

13. ಅಭ್ಯರ್ಥಿಗಳು ಈಗಾಗಲೇ ಯಾವುದಾದರೂ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಅಂತಹ ಸಂಸ್ಥೆಯ ಮುಖ್ಯಸ್ಥರ ಅನುಮತಿಯೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು.

14. ನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಸಂದರ್ಭದಲ್ಲಿ ಯಾವುದೇ ಕಾರಣವನ್ನು ನೀಡದೇ ರದ್ದುಗೊಳಿಸುವ ಅಥವಾ ಮುಂದೂಡುವ ಅಧಿಕಾರವನ್ನು ಆಡಳಿತ ಮಂಡಳಿ ಹೊಂದಿರುತ್ತದೆ.

15. ನೇಮಕಾತಿಯಾದ ಅಭ್ಯರ್ಥಿಗಳ ಪರೀಕ್ಷಣಾವಧಿ(ಪ್ರೊಬೇಷನರಿ) ಐದು ವರ್ಷಗಳ ಅವಧಿಯಾಗಿರುತ್ತದೆ. ಇದನ್ನು ವಿಸ್ತರಿಸುವ ಅಧಿಕಾರ ಬ್ಯಾಂಕಿನ ಆಡಳಿತ ಮಂಡಳಿ ಕಾಯ್ದಿರಿಸಿದೆ.

16. ಅರ್ಜಿಗಳನ್ನು ಆನ್‌ಲೈನ್ ಮೂಲಕ ಭರ್ತಿ ಮಾಡಿ ಅರ್ಜಿ ಶುಲ್ಕವನ್ನು Net Banking, Credit card, Debit card, UPI ಮುಖಾಂತರ ಅರ್ಜಿ ಶುಲ್ಕ ಮತ್ತು Payment Gateway ಚಾರ್ಜಸ್‌ನ್ನು ಪಾವತಿ ಮಾಡತಕ್ಕದ್ದು. ಶುಲ್ಕವನ್ನು ಪಾವತಿಸಲು ನಿಗದಿಪಡಿಸಿದ ಕೊನೆಯ **ದಿ:17.01.2025ರ ದಿನಾಂತ್ಯದ** ಒಳಗಾಗಿ ಪಾವತಿಸತಕ್ಕದ್ದು, ತಪ್ಪಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು. Online Payment ಹೊರತು ಪಡಿಸಿ ಡಿ.ಡಿ, ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ.

17. ಅಭ್ಯರ್ಥಿತ್ವದ ವಿಚಾರದಲ್ಲಿ ಅಭ್ಯರ್ಥಿಗಳೊಂದಿಗೆ ಬ್ಯಾಂಕು ಯಾವುದೇ ಪತ್ರ ಇ-ಮೇಲ್ ವ್ಯವಹಾರವನ್ನು ನಡೆಸುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ **(ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ)** ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು ಸಹಾಯವಾಣಿ (Helpline) : **7204179845**

**18. ಕಾಲ ಕಾಲಕ್ಕೆ Website ಪರಿಶೀಲಿಸಲು ಸೂಚಿಸಿದೆ.**

**ಮುಖ್ಯ ಕಾರ್ಯನಿರ್ವಹಣಾಧಿಕಾರಿ**
**ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,**
**ಮಡಿಕೇರಿ.**

ಆನ್‌ಲೈನ್‌ನಲ್ಲಿ ಅರ್ಜಿ ತುಂಬುವ ವಿಧಾನ:

**ಹಂತ:–1)**

Apply Here ಬಟನ್ ಒತ್ತಿದಾಗ ನಿಮಗೆ ರೆಕ್ರೂಟ್ಮೆಂಟ್ ವೆಬ್ ಸೈಟ್ ತೆರೆಯುತ್ತದೆ. ಅಲ್ಲಿ ನಿಮಗೆ ಲಾಗಿನ್ ಮತ್ತು ಸೈನ್ ಅಪ್ Option ಗಳಿದೆ. ನೀವು ಈಗಾಗಲೇ ರಿಜಿಸ್ಟರ್ ಆಗಿದ್ದರೆ ನಿಮ್ಮ ರಿಜಿಸ್ಟರ್ಡ್ ಈಮೇಲ್ ಐಡಿ ಮತ್ತು ಪಾಸ್‌ವರ್ಡ್ ಅನ್ನು ದಾಖಲಿಸುವ ಮೂಲಕ ಲಾಗಿನ್ ಆಗಬಹುದು, ಇಲ್ಲದಿದ್ದರೆ ಸೈನ್ ಅಪ್ ಲಿಂಕ್ ಮುಖಾಂತರ ನಿಮ್ಮ ಹೆಸರು, E-mail ವಿಳಾಸ ಮತ್ತು ಮೊಬೈಲ್ ನಂಬರ್‌ನ್ನು ಹೊಸದಾಗಿ ದಾಖಲಿಸಿ ರಿಜಿಸ್ಟ್ರೇಶನ್ ಮಾಡಬಹುದು. ರಿಜಿಸ್ಟ್ರೇಶನ್ ಆದ ನಂತರ ನಿಮ್ಮ ಮೊಬೈಲ್ ನಂಬರ್‌ಗೆ ಓ.ಟಿ.ಪಿ ಸಂಖ್ಯೆ ಮತ್ತು ಪಾಸ್‌ವರ್ಡ್ ಎಸ್.ಎಂ.ಎಸ್ ಮೂಲಕ ಬರುತ್ತದೆ. ನಂತರ ಲಾಗಿನ

ಸ್ಕ್ರೀನ್‌ನಲ್ಲಿರುವ ಸೈನ್‌ಇನ್‌ನಲ್ಲಿ ನಿಮ್ಮ ರಿಜಿಸ್ಟರ್ಡ್ E-mail ಮತ್ತು ಪಾಸ್‌ವರ್ಡ್ ಅನ್ನು ಎಂಟರ್ ಮಾಡಿ ಸೈನ್‌ಇನ್ ಬಟನ್ ಒತ್ತಿದಾಗ ಓ.ಟಿ.ಪಿ.ಯನ್ನು ತುಂಬುವ ಬಾಕ್ಸ್ ತೆರೆಯುತ್ತದೆ. ಅಲ್ಲಿ ನಿಮಗೆ ಬಂದಿರುವ ಓ.ಟಿ.ಪಿ.ಯನ್ನು ತುಂಬಿ ಮುಂದುವರೆಯುವುದು.

**ಹಂತ:–2)**

ನೀವು ತುಂಬಿದ ಲಾಗಿನ್ ಮಾಹಿತಿಯು ಸರಿಯಾಗಿದ್ದಲ್ಲಿ ನಿಮ್ಮ ಗಣಕಯಂತ್ರದಲ್ಲಿ ನಿಮ್ಮ ವೈಯಕ್ತಿಕ ವಿಷಯಗಳನ್ನು ತುಂಬುವ ಪುಟ ತೆರೆಯುತ್ತದೆ. ಅಲ್ಲಿ ನಿಮ್ಮ ವೈಯಕ್ತಿಕ ಮಾಹಿತಿಗಳನ್ನು ತುಂಬಿ ಮುಂದುವರೆಯಿರಿ.

**ಹಂತ:–3)**

ಮುಂದಿನ ಪುಟದಲ್ಲಿ ನೇಮಕಾತಿ ಮಾಡಲಿರುವ ಹುದ್ದೆಯ ವಿವರಗಳು ಇರುತ್ತದೆ, ಹಾಗೂ ಅಪ್ಲೈ ಬಟನ್ ಸಹ ಇರುತ್ತದೆ. ಅಭ್ಯರ್ಥಿಯು ತನ್ನ ವಿದ್ಯಾಭ್ಯಾಸಕ್ಕೆ ಸರಿಹೊಂದುವ ಹುದ್ದೆಯ ಮುಂದಿರುವ ಅಪ್ಲೈ ಬಟನ್ ಅನ್ನು ಒತ್ತಿದರೆ ಮುಂದಿನ ಪುಟವು (ಅರ್ಜಿ) ತೆರೆದುಕೊಳ್ಳುತ್ತದೆ. ಅರ್ಜಿಯಲ್ಲಿರುವ ಎಲ್ಲಾ ಮಾಹಿತಿಯನ್ನು ಕಡ್ಡಾಯವಾಗಿ ತುಂಬಬೇಕು.

**ಹಂತ:–4)**

ಅಭ್ಯರ್ಥಿಯು ಪದವಿಯನ್ನು ವಾರ್ಷಿಕ ಪರೀಕ್ಷೆಯ ಮುಖಾಂತರ ಪಾಸು ಮಾಡಿದ್ದಲ್ಲಿ year/semester ಅಲ್ಲಿ Year ಅನ್ನು select ಮಾಡಬೇಕು. ಮತ್ತು ಕೆಳಗಿನ ಎಂಟರ್ ಮಾರ್ಕ್ಸ್ ವಿಭಾಗದಲ್ಲಿ ಪ್ರತಿ ವಾರ್ಷಿಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ನಮೂದಿಸತಕ್ಕದ್ದು.

ಅಭ್ಯರ್ಥಿಯು ಪದವಿಯನ್ನು ಸೆಮಿಸ್ಟರ್ ಮತ್ತು ಮಾರ್ಕ್ಸ್ ಪರೀಕ್ಷೆಯ ಮುಖಾಂತರ ಪಾಸು ಮಾಡಿದ್ದಲ್ಲಿ ಅಲ್ಲಿ year/semester ಅಲ್ಲಿ select ಮಾಡಬೇಕು. ಮತ್ತು ಕೆಳಗಿನ ಎಂಟರ್ ಮಾರ್ಕ್ಸ್ ವಿಭಾಗದಲ್ಲಿ ಪ್ರತೀ ಸೆಮಿಸ್ಟರ್ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ನಮೂದಿಸತಕ್ಕದ್ದು. ಹಾಗಲ್ಲದೇ ಸೆಮಿಸ್ಟರ್ ಮತ್ತು ಗ್ರೇಡ್ ಪರೀಕ್ಷೆಯ ಮುಖಾಂತರ ಪಾಸು ಮಾಡಿದ್ದಲ್ಲಿ Scheme ಅಲ್ಲಿ Gradeselect ಮಾಡಬೇಕು.

**ಮುಖ್ಯ ಕಾರ್ಯನಿರ್ವಹಣಾಧಿಕಾರಿ**
**ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,**
**ಮಡಿಕೇರಿ**

ಪುಟದಲ್ಲಿ ಮೂಡಿಬರುವ ಅರ್ಜಿಯಲ್ಲಿ ಅಭ್ಯರ್ಥಿಯು ಮಾಹಿತಿಗಳನ್ನು ತುಂಬಿ, ಗೆಝೆಟೆಡ್ ಆಫೀಸರ್ ಅವರ ಸಹಿ ಮಾಡಿಸಿದ ಎಲ್ಲಾ ಸರ್ಟಿಫಿಕೇಟ್ ಹಾಗೂ ಮಾರ್ಕ್ಸ್ ಕಾರ್ಡ್‌ಗಳನ್ನು ಸ್ಕಾನ್ ಮಾಡಿಸಿ ಅಪ್‌ಲೋಡ್ ಮಾಡತಕ್ಕದ್ದು.

ಅರ್ಜಿ ನಮೂನೆಯಲ್ಲಿ ಕೇಳಿರುವ ಎಲ್ಲಾ ಮಾಹಿತಿಗಳನ್ನು ತುಂಬಿದ್ದೇನೆಂದು ಖಚಿತಪಡಿಸಿಕೊಂಡ ನಂತರ Submit ಬಟನ್ ಒತ್ತಬೇಕು. ಒಬ್ಬ ಅಭ್ಯರ್ಥಿಯು ಒಂದು ಹುದ್ದೆಯ ಅರ್ಜಿಗೆ Submit ಬಟನ್ ಒತ್ತುವ ಮೊದಲು ಎಷ್ಟು ಬಾರಿ ಬೇಕಾದರೂ ಲಾಗಿನ್ ಆಗಿ ಮಾಹಿತಿಯನ್ನು ಬದಲಾಯಿಸಬಹುದು. ಒಮ್ಮೆ Submit ಬಟನ್ ಒತ್ತಿದ ಮೇಲೆ ಯಾವುದೇ ರೀತಿಯಿಂದಲೂ ಆ ಅರ್ಜಿಯ ಮಾಹಿತಿಗಳನ್ನು ಬದಲಾಯಿಸಲು ಅವಕಾಶವಿಲ್ಲ.

ಅರ್ಜಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು upload ಮಾಡಿದ ನಂತರ Payemnt Gateway ಪುಟವು ತೆರೆಯುತ್ತದೆ. ಇಲ್ಲಿ ನೀವು Net Banking / Debit Card / Credit Card / UPI ಮುಖಾಂತರ ನಿಮ್ಮ Application Fees ಅನ್ನು ತುಂಬಬಹುದು.

ಹಣ ವರ್ಗಾವಣೆಯಾದ ನಂತರ ನೀವು ನಿಮ್ಮ Application ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಒಂದು ವೇಳೆ ನಿಮ್ಮ ಖಾತೆಯಲ್ಲಿ ಹಣವು ಕಟಾವಣೆ ಆಗಿ, ನಮಗೆ ಪೇಮೆಂಟ್ receipt ತಲುಪುವುದು ತಡವಾದರೆ, ನೀವು 1 ಗಂಟೆಯ ನಂತರ Verify your Payment ಮೂಲಕ ಪರೀಕ್ಷಿಸಿ.

Download Application ಬಟನ್ ಮುಖಾಂತರ ಅಭ್ಯರ್ಥಿಯು ಅರ್ಜಿಯನ್ನು ಎಷ್ಟು ಬಾರಿ ಬೇಕಾದರೂ Download ಮಾಡಬಹುದು.

**ಅಡಕಗಳ ಫೈಲ್ ಫಾರ್ಮೆಟ್**

- ಭಾವಚಿತ್ರ : ಕಲರ್ : ಸೈಜ್ 200 ಕೆಬಿ : ಜೆಪಿಜಿ ಅಥವಾ ಜೆಪೆಗ್ (92 ಡಿಪಿಐ)
- ಇತರೆ ಅಡಕಗಳು : ಕಪ್ಪು ಬಿಳುಪು : ಸೈಜ್ 1 ಎಂಬಿ : ಪಿಡಿಎಫ್ (150 ಡಿಪಿಐ)
- ಯಾವುದೇ ವರ್ಷದ/ಸೆಮಿಸ್ಟರ್‌ನ ಮಾರ್ಕ್ಸ್ ಕಾರ್ಡ್/ಅಂಕಪಟ್ಟಿಗಳು ಒಂದಕ್ಕಿಂತ ಹೆಚ್ಚಿದ್ದಲ್ಲಿ ಅಂತಹ ಅಂಕಪಟ್ಟಿಗಳನ್ನು ಒಂದೆ ಪಿ.ಡಿ.ಎಫ್. ಫಾರ್ಮೆಟ್‌ನಲ್ಲಿ ಬರುವಂತೆ ಸ್ಕ್ಯಾನ್ ಮಾಡಿ ಅಪಲೋಡ ಮಾಡುವುದು.

**ದುರ್ನಡತೆ :**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸುತ್ತಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡುಬಂದಲ್ಲಿ ಅವನು/ಅವಳು ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಹುದ್ದೆಯ ಸಂದರ್ಶನದಿಂದ / ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು. ಮುಂದೆ ಒಕ್ಕೂಟವು ನೇಮಕಾತಿ ಮಾಡುವ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದು.

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,
ಮಡಿಕೇರಿ.

ನಿರ್ಬಂಧ :

1. ಯಾವುದೇ ನಿಷೇಧಿತ ಸಂಘ ಸಂಸ್ಥೆಯ ಸದಸ್ಯನಾಗಿರುವಲ್ಲಿ ಅಥವಾ ಸದಸ್ಯನಾಗಿದ್ದಲ್ಲಿ ಅಥವಾ ಯಾವುದೇ ನಿಷೇಧಿತ ಸಂಸ್ಥೆಯ ಕಾರ್ಯಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಲ್ಲಿ.
2. ಭಾರತ ಸಂವಿಧಾನಕ್ಕೆ ಚ್ಯುತಿ ತರುವ ಕಾರ್ಯದಲ್ಲಿ ಪ್ರವರ್ತನಾದಲ್ಲಿ.
3. ಕಾನೂನು ಭಂಗ ಮಾಡಿ ಹಿಂಸಾಕೃತ್ಯದಲ್ಲಿ ತೊಡಗಿಕೊಂಡಿದ್ದಲ್ಲಿ.
4. ಭಾರತ ದೇಶದ ಸಾರ್ವಭೌಮ ಹಾಗೂ ಸುಭದ್ರತೆಗೆ ಧಕ್ಕೆ ತರುವ ಕಾರ್ಯದಲ್ಲಿ ತೊಡಗಿಕೊಂಡಿದ್ದಲ್ಲಿ.
5. ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಸೇವೆಯಿಂದ ಉಚ್ಚಾಟನೆಗೊಂಡಿದ್ದಲ್ಲಿ,
6. ವ್ಯಕ್ತಿಯು ಕಾನೂನುಬಾಹಿರ ಕೃತ್ಯಗಳಲ್ಲಿ ತೊಡಗಿ ಅಪರಾಧಕ್ಕೆ ಒಳಗಾದ ಪ್ರಸಂಗಗಳಲ್ಲಿ, ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿಯು ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿಯಿರುವ ವ್ಯಕ್ತಿಯನ್ನು ವಿವಾಹವಾಗಿರುವ ಮಹಿಳಾ ಅಭ್ಯರ್ಥಿಯು ನೇಮಕಾತಿಗೆ ಅರ್ಹರಿರುವುದಿಲ್ಲ.

**ವಿಶೇಷ ಸೂಚನೆ: ನೇಮಕಾತಿ ವಿಷಯವಾಗಿ ಆಡಳಿತ ಮಂಡಳಿಯೊಂದಿಗೆ ಚರ್ಚೆಗೆ ಅವಕಾಶವಿರುವುದಿಲ್ಲ.**

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.

ಸದಸ್ಯ ಕಾರ್ಯದರ್ಶಿ ಹಾಗೂ
ಮುಖ್ಯ ಕಾರ್ಯನಿರ್ವಾಹಣಾಧಿಕಾರಿ,
ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.
ಮಡಿಕೇರಿ